1	2	3	4	5
4)	ಪ್ಲಾಸ್ಟಿಕ್ ಕಲ್ಚರ್	70000-00	46	"
5)	ವೀಳೆದೆಲೆ ಯೋಜನೆ	3750-00	6	ಫಲಾನುಭವಿಗಳು
6)	ಕಂದಮೂಲ ಅಭಿವೃದ್ಧಿ	3000-00	12	"
	ಒಟ್ಟು ರೂ.	19278-00		
		ರಾಜ್ಯ ವಲಯ ಯೋಜನೆ		
1)	ಆಲೂಗಡ್ಡೆ ನಿಜಬೀಜ ಉತ್ಪಾದನೆ	16000-00	6	ಪ್ರಾತ್ಯಕ್ಷತೆ
2)	ಗಿರಿಜನ ಉಪಯೋಜನೆ	15325-00	78	ಫಲಾನುಭವಿಗಳು
3)	ವಿಶೇಷ ಘಟಕ ಯೋಜನೆ	57675-00	542	ತೋಟಗಳ ಸ್ಥಾಪನೆ ಹಾಗೂ ನಿರ್ವಹಣೆ
	ಒಟ್ಟು ರೂ.	89000-00		
		ವಿಶೇಷ ಯೋಜನೆ		
1)	ಉದ್ಯೋಗ ಭರವಸೆ ಯೋಜನೆ	100000-00	35	ಎಕರೆ ಪ್ರದೇಶ ವಿಸ್ತರಣೆ
	ಒಟ್ಟು ರೂ.	631978-00		

ವಿಷಯ:- ರಾಜ್ಯದಲ್ಲಿ ತಲೆದೋರಿರುವ ಛಾಪಾ ಕಾಗದಗಳ ಅಭಾವ ಹಾಗೂ ಶುಲ್ಕ ಏರಿಕೆ.

1428 (1609) **ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾನ್ಯ ಕಂದಾಯ ಸಚಿವರು):-** ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) ರಾಜ್ಯಾದ್ಯಂತ ನೋಂದಣಿ ಶುಲ್ಕ ಏರಿಕೆಯಾಗಿರುವ ಹಿನ್ನೆಲೆಯಲ್ಲಿ ಛಾಪಾ ಕಾಗದಗಳಿಗೆ ವಿಪರೀತ ಬೇಡಿಕೆಯಿಂದ ಕಾಳಸಂತೆ ವ್ಯಾಪಾರಕ್ಕೆ ಉತ್ತೇಜನವಾಗಿರುವುದು ನಿಜವೇ?

(ಆ) ಈ ಛಾಪಾ ಕಾಗದ ಅಭಾವದ ನಿವಾರಣೆಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು):-

(ಅ) ನಿಜವಲ್ಲ.

(ಆ) ಛಾಪಾ ಕಾಗದಗಳ ಅಭಾವ ಉಂಟಾಗದಂತೆ ಈ ಕೆಳಕಾಣಿಸಿದ ಕ್ರಮಗಳನ್ನು ಅನುಸರಿಸಲಾಗುತ್ತಿದೆ:

1. ರಾಜ್ಯದ ಎಲ್ಲಾ ಉಪ–ನೋಂದಣಿ ಕಛೇರಿಗಳಿಗೆ ಉಬ್ಬಚ್ಚು ಯಂತ್ರಗಳನ್ನು ಸರಬರಾಜು ಮಾಡಿ ರೂ. 999-99 ಪೈಸೆಗಳವರೆಗಿನ ಮೌಲ್ಯದ ಮುದ್ರಾಂಕ ಪತ್ರವನ್ನು ಉಬ್ಬಚ್ಚು ಮಾಡಲು ಅವಕಾಶ ಕಲ್ಪಿಸಲಾಗಿದೆ.

2. ರಾಜ್ಯಾದ್ಯಾಂತ 'ಎ' ಮತ್ತು 'ಬಿ' ವರ್ಗದ ಛಾಪಾ ಕಾಗದ ಮಾರಾಟಗಾರರು ಛಾಪಾ ಕಾಗದಗಳನ್ನು ಮಾರಾಟ ಮಾಡಲು ಇದ್ದ ರೂ. 10,000-00 ಮತ್ತು ರೂ. 5,000-00 ಗಳ ಮಿತಿಯನ್ನು ಅನುಕ್ರಮವಾಗಿ 25,000-00 ಮತ್ತು 15,000 ರೂ. ಗಳವರೆಗೆ ಹೆಚ್ಚಿಸಲಾಗಿದೆ.

3. ಕರ್ನಾಟಕ ರಾಜ್ಯ ನೋಂದಣಿ ಹಾಗೂ ಮುದ್ರಾಂಕ ಇಲಾಖಾ ನೌಕರರ ಸಂಘ ಮತ್ತು ಬೆಂಗಳೂರು ಲೀಗಲ್ ಪ್ರಾಕ್ಟೀಷನರ್ಸ್ ಕೋ–ಆಪರೇಟಿವ್ ಸೊಸೈಟಿ ಇವೆರಡೂ ಸಂಸ್ಥೆಗಳು 1,00,000-00 ರೂ. ಗಳವರೆಗಿನ ಮುದ್ರಾಂಕ ಕಾಗದಗಳನ್ನು ಮಾರಾಟ ಮಾಡಲು ಅವಕಾಶವನ್ನು ಕಲ್ಪಿಸಲಾಗಿದೆ.

4. ವಿಶಿಷ್ಟ ಸಂದರ್ಭಗಳಲ್ಲಿ ಕೊರತೆ ಬಿದ್ದ ಮುದ್ರಾಂಕ ಕಾಗದದ ಬದಲಿಗೆ ಚಲನ್ ಮೂಲಕ ಹಣ ಕಟ್ಟಿಸಿಕೊಂಡು ಮುದ್ರಾಂಕ ಕಾಯ್ದೆಯ ಕಲಂ–40ರಡಿಯಲ್ಲಿ ನೋಂದಣಿ ಮಾಡಲು ಅವಕಾಶವಿದೆ.

ವಿಷಯ:- ರೈತರಿಗೆ ರಿಯಾಯಿತಿ ದರದಲ್ಲಿ ಗೊಬ್ಬರ ವಿತರಣೆ.

1429 (1337) **ಶ್ರೀ ಹೆಚ್.ಸಿ. ಬಾಲಕೃಷ್ಣ ಮಾನ್ಯ ಕೃಷಿ ಸಚಿವರು:-** ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) ರಾಜ್ಯಾದ್ಯಾಂತ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ರಿಯಾಯ್ತಿ ದರದಲ್ಲಿ ಗೊಬ್ಬರ ವಿತರಿಸುವ ಯೋಜನೆ ಸರ್ಕಾರದಲ್ಲಿದೆಯೇ, ಹಾಗಿದ್ದಲ್ಲಿ ಎಂದಿನಿಂದ ವಿತರಿಸಲಾಗುವುದು?

(ಆ) ಮಾಗಡಿ ತಾಲ್ಲೂಕು ರೈತರಿಗೆ ವ್ಯವಸಾಯಕ್ಕೆ ಅಗತ್ಯವಾದ ಗೊಬ್ಬರದ ದಾಸ್ತಾನು ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಕೊರತೆ ನಿವಾರಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಸಿ. ಬೈರೆಗೌಡ (ಕೃಷಿ ಸಚಿವರು):-

(ಅ) ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ರಿಯಾಯಿತಿ ದರದಲ್ಲಿ ರಸಗೊಬ್ಬರ ವಿತರಿಸುವ ಪ್ರತ್ಯೇಕ ಯೋಜನೆ ಸರ್ಕಾರದಲ್ಲಿರುವುದಿಲ್ಲ.

(ಆ) ಮಾಗಡಿ ತಾಲ್ಲೂಕಿನಲ್ಲಿ ರಸಗೊಬ್ಬರಗಳ ಕೊರತೆ ಇರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಆದರೂ ಬೇಡಿಕೆ ಇದ್ದಾಗ ರೈತರಿಗೆ ಅಗತ್ಯವಾದಷ್ಟು ರಸಗೊಬ್ಬರಗಳನ್ನು ಪೂರೈಸಲು ವ್ಯವಸ್ಥೆ ಮಾಡಲಾಗಿದೆ.

ವಿಷಯ:- ಮಾಗಡಿಯಲ್ಲಿರುವ ಶ್ರೀ ಸೋಮೇಶ್ವರ ದೇವಾಲಯವು ಶಿಥಿಲಗೊಳ್ಳುತ್ತಿರುವುದರ ಬಗ್ಗೆ.

1431(1343(ಎ))